**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ**
**ಎಸ್.ಸಿ ಸಂಃ 93/2019**

ಗುರುಮಠಕಲ್ ಪೋಲೀಸ್ ಠಾಣೆ . .....ಫಿರ್ಯಾದಿ

ವಿರುದ್ಧ

ಆಶಪ್ಪ .....ಆರೋಪಿ

**ದೋಷಾರೋಪಣೆ**

ನಾನು **ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್,** ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ, ಆರೋಪಿತರಾದಃ

> ಆಶಪ್ಪ ತಂದೆ ಮಾಳಪ್ಪ ಹೊಸಕುರುಬರು, ವಯಸ್ಸು 55 ವರ್ಷ, ಉದ್ಯೋಗ ಃ ಒಕ್ಕಲುತನ, ಸಾಃ ಲಕ್ಷ್ಮೀನಗರ ಗುರುಮಠಕಲ್ ಜಿಃ ಯಾದಗಿರಿ.

**ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.**

ಗುರುಮಠಕಲ್ ಪೋಲೀಸಠಾಣಾ ವ್ಯಾಪ್ತಿಯಲ್ಲಿ ದಿನಾಂಕ: 20.04.2019 ರಂದು ಚಾಸಾ-1 ಕಾಶಮ್ಮ ರವರ ಗಂಡ ಹಣಮಂತ ಜೀಪಿನ ಬಾಡಿಗೆ ಕೊಟ್ಟಿದ್ದು, ಅದರ ಸಂಬಂಧ ನೀವು ನಿಮ್ಮ ತಾಯಿ ಚಾಸಾ-4 ಸಾಬಮ್ಮ ರವರೊಂದಿಗೆ ಜಗಳ ಮಾಡಿ, ದೊಬ್ಬಾಡಿ ಬೈದಿರುತ್ತೀರಿ, ಮತ್ತೆ ಗುರುಮಠಕಲ್ ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿ ಹಾದೋದ ಸಿಸಿ ರಸ್ತೆಗೆ ಹೊಂದಿಕೊಂಡಿದ್ದ ಚಹ ಬಂಡಿ ಹತ್ತಿರ ಎಲ್ಲರೂ ಕೂಡಿ ಚಹ ಕುಡಿಯುವ ಕಾಲಕ್ಕೂ ನಿಮ್ಮ ತಾಯಿ ಚಾಸಾ-4 ರವರಿಗೆ ಬೈಯುವುದನ್ನು ನೋಡಿ ಹಣಮಂತ **ತಾಯಿಗುಡ್ಯಾಕ ಕಿರಿಕಿರಿ ಮಾಡ್ಲತ್ತಿ ಬಿಡು ಸಾಕು ಮುಂದೆ ಮತ್ಯಾವುದಾದರು ಕಾರ್ಯಕ್ರಮವಿದ್ದಾಗ ನೀ ದುಡ್ಡು ಕೊಡಸ್ಪಗಿ ತೋಗೂ** ಅಂತಾ ಅಂದಾಗ, ನೀವು ಸಾಯಂಕಾಲ 5.30 ಗಂಟೆಗೆ **ನಿಂದೆನ್ ಸುದ್ದಿಲೇ** ಅಂತಾ ಒಮ್ಮಿಂದೊಮ್ಮೇಲೆ ಸಿಟ್ಟಿಗೆ ಬಂದು ಹಣಮಂತನ ಎದೆಯ ಮೇಲೆ ಬನಿಯಾನ್ ಹಿಡಿದು ಕುತ್ತಿಗೆಗೆ ಕೈ ಹಾಕಿ ಹಿಂದಕ್ಕೆ ನೂಕಿಸಿ ಕೊಟ್ಟ ರಭಸಕ್ಕೆ ಹಣಮಂತ ಚಹ ಬಂಡಿ ಮುಂದಿದ್ದ ಸಿಸಿ ರಸ್ತೆಯ ಮೇಲೆ ಅಂಗಾತವಾಗಿ ಬಿದ್ದು, ತಲೆಗೆ ಒಳಪೆಟ್ಟಾಗಿ ಮೃತಪಟ್ಟಿದ್ದು, ಕೊಲೆಯೆಂದು ಪರಿಗಣಿಸಲಾಗದ ಅಪರಾಧಿಕ ಮಾನವ ಹತ್ಯೆಯನ್ನು ಮಾಡಿ, ತನ್ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.304 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ **03.10.2023** ರಂದು ಆದೇಶಿಸಿದ್ದೇನೆ.

**ಸ್ಥಳಃ ಯಾದಗಿರಿ**

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಯಾದಗಿರಿ**